**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 17.05.2021.

**1] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 83/2021 ಕಲಂ 15[ಎ], 32[3] ಕರ್ನಾಟಕ ಅಬಕಾರಿ ಕಾಯ್ದೆ–1965 & 188, 269 ಐ.ಪಿ.ಸಿ.**

ದಿನಾಂಕ: 16.05.2021 ರಂದು 12:45 ಅವರ್ಸಕ್ಕೆ, ಇದರಲ್ಲಿ ಆರೋಪಿತರಾದ ಶಂಕರ ತಂದೆ– ಬಸಪ್ಪ ನಾಗರಾಳ ವಯಾ–59 ವರ್ಷ, ಜಾತಿ–ಹಿಂದು ಎಸ್.ಸಿ, ಉದ್ಯೋಗ:ಹೊಟೇಲ್ ಕೆಲಸ ಸಾ: ಬಿದರಕುಂದಿ. ಇವನು ಪ್ರಸ್ತುತ ಮಾನ್ಯ ರಾಜ್ಯ ಸರ್ಕಾರ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೋರೋನಾ ವೈರಸ್/ಕೊವಿಡ್–19 ಸಾಂಕ್ರಾಮಿಕ ರೋಗ ಸಾರ್ವಜನಿಕರಿಗೆ ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದ್ದು ಹಾಗೂ ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಉಲ್ಲಂಘನೆ ಮಾಡಿದ್ದಲ್ಲದೇ, ಬಿದರಕುಂದಿ ಗ್ರಾಮದ ಅಂಬೇಡ್ಕರ್ ಸರ್ಕಲ್‌ದ ಹತ್ತಿರ ತನ್ನ ಹೊಟೇಲ್ ಅಂಗಡಿಯ ಮುಂದೆ ತನ್ನ ಸ್ವಂತ ಪಾಯಿದೆಗೊಸ್ಕರ ಸಂಬಂಧಿಸಿದ ಪ್ರಾಧಿಕಾರದಿಂದ ಯಾವುದೇ ಲೈಸೆನ್ಸ ವ ಪರವಾನಿಗೆಯನ್ನು ಪಡೆಯದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಗ್ಲಾಸು, ನೀರು ಹಾಗೂ ತಿನಿಸು ಕೊಟ್ಟು ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ಸಿಕ್ಕಿದ್ದು,ಈ ಬಗ್ಗೆ ಶ್ರೀ. ಎಮ್. ಬಿ ಬಿರಾದಾರ ಪಿ.ಎಸ್.ಐ [ಕಾಸು] ಮುದ್ದೇಬಿಹಾಳ ಪೊಲೀಸ್ ಠಾಣೆ. ರವರು ಪಿರ್ಯಾದಿ ಕೊಟ್ಟಿದ್ದರ ಮೇರೆಗೆ ದಿನಾಂಕ 16.05.2021 ರಂದು ಮುದ್ದೇಬಿಹಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬ.ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 10/2021 ಕಲಂ 174 ಸಿ.ಆರ್.ಪಿ.ಸಿ**

ದಿನಾಂಕ;15.05.2021 ರಂದು ಸಾಯಂಕಾಲ 17:00 ಗಂಟೆಗೆ ರಾಜೇಸಾಬ ಮೊದಿಸಾಬ ವಾಲಿಕಾರ ಇವರ ತೊಟದಲ್ಲಿ ಮೃತ ಸವೀತಾ ಗಂಡ ರವಿ ಲಂಬಾಣಿ ವಯಾ 28 ವರ್ಷ ಸಾ॥ ಅಂಬಳನೂರ ತಾಂಡಾ ತಾ॥ ಬ ಬಾಗೇವಾಡಿ ಇತಳಿಗೆ ಸುಮಾರು 6 ವರ್ಷಗಳಿಂದ ಹೊಟ್ಟೆ ನೊವು ಇದ್ದು ನಾವು ಖಾಸಗಿಯಾಗಿ ಸಾಕಷ್ಟು ಸಲ ತೋರಿಸಿದರು ಕಡಿಮೆ ಆಗಿರಲ್ಲಿ ಒಂದು ತರಹ ಮಾನಸಿಕ ಮಾಡಿಕೊಂಡಿದ್ದಳು. ಹೊಟ್ಟೆ ಕಡಿತ ತ್ರಾಸ್ ತಾಳಲಾರದೆ ನಾನು ಸಾಯ್ಯುತ್ತೇನೆ ಅಂತ ನಮ್ಮ ಮುಂದೆ ಹೇಳುತ್ತಿದ್ದಳು ನಿನ್ನೆ ದಿನಾಂಕ 15.05.2021 ರಂದು ಸಾಯಂಕಾಲ 1700 ಗಂಟೆಯ ಸುಮಾರಿಗೆ ಹೊಟ್ಟೆ ತ್ರಾಸು ತಾಳಲಾರದೆ ತನ್ನಿಂದ ತಾನೆ ರಾಜೇಸಾಬ ಮೊದಿನಸಾಬ ವಾಲಿಕಾರ ಇವರ ತೊಟದ ಬಾವಿಯಲ್ಲಿ ಬಿದ್ದು ಉಸಿರುಗಟ್ಟಿ ಮೃತಳಾಗಿರುತ್ತಾಳೆ ಹೊರತು ಅವಳ ಸಾವಿನಲ್ಲಿ ನಮಗೆ ಬೇರೆ ಯಾವುದೆ ಸಂಶಯ ಇರುವುದಿಲ್ಲ ಅಂತಾ ಫಿರ್ಯಾದಿಯಲ್ಲಿ ನಮೂದಿ ಇದ್ದು, ಈ ಬಗ್ಗೆ ಗೀರಿಯಪ್ಪ ತಂದೆ ಸುಬ್ಬಪ್ಪ ಲಮಾಣಿ ವಯಾ 45 ವರ್ಷ ಜಾತಿ ಹಿಂದೂ ಲಂಬಾಣಿ ಉದ್ಯೂಗ ಒಕ್ಕಲುತನ ಸಾ॥ ಅಂಬಳನೂರ ತಾಂಡ ತಾ॥ ಬ.ಬಾಗೇವಾಡಿ ರವರು ವರದಿ ಕೊಟ್ಟ ಮೇರೆಗೆ, ದಿನಾಂಕ: 16.05.2021 ರಂದು ಬ.ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.